# ಜಿಟಿ ಬೌಲಿಂಗ್ ಮೇಟಿ

ಬ್ಯಾಟ್ಸ್‌ಮನ್‌ಗಳ ಬೀಸಾಟ ನೋಡಿ ಶಿಳ್ಳೆ ಹೊಡೆಯುವ ನಾವು ನೀವು ಚುಟುಕು ಕ್ರಿಕೆಟ್‌ನ ಬೌಲಿಂಗ್ ಚಾಲಾಕಿಗಳಿಗೂ ಶಹಬ್ಬಾಸ್ ಹೇಳಬೇಕು. ‘ಗುಜರಾತ್ ಟೈಟನ್ಸ್’ ತಂಡದ ಕೋಚ್ ಆಶಿಶ್ ನೆಹ್ರಾ, ತಮ್ಮ ಬೌಲಿಂಗ್ ಪಡೆಗೆ ಅಂತಹ ನೀರು–ಗೊಬ್ಬರ ಹಾಕಿದ್ದಾರೆ.

■ ವಿಶಾಖ ಎನ್.



‘ಇಂಡಿಯನ್ ಪ್ರೀಮಿಯರ್ ಲೀಗ್’ (ಐಪಿಎಲ್) ಕ್ರಿಕೆಟ್‌ನಲ್ಲಿ ಬೌಂಡರಿ ಗಡಿ ಹತ್ತಿರ ಇರುತ್ತದೆ. ಕೆಲವು ಮೂಲೆಗಳು 65 ಮೀಟರ್‌ಗಿಂತ ತುಸು ದೂರ ಇರುವ ಉದಾಹರಣೆಗಳು ಇವೆ. ಹೀಗೆ ಇದ್ದಾಗ ಬೌಲರ್‌ಗಳಿಗೆ ಅನುಕೂಲ ಕಡಿಮೆ. ಒಳ್ಳೆಯ ಎಸೆತಗಳು ಬ್ಯಾಟ್ ಅಂಚಿಗೆ ಬಡಿದರೂ ಕ್ಯಾಚ್ ಆಗದೆ ಸಿಕ್ಸರ್‌ಗೆ ಹೋಗುವುದು ಉಂಟು. ಮೊದಲ ಆರು ಓವರ್‌ಗಳ ಪವರ್ ಪ್ಲೇ ಕೂಡ ಬ್ಯಾಟ್ಸ್‌ಮನ್‌ಗಳಿಗೆ ವರದಾನ. ಅದರ ಲಾಭ ಪಡೆಯುವುದು ಬೌಲರ್‌ಗಳಿಗೆ ತುಂಬಾ ಕಷ್ಟ. ಯಾರ್ಕರ್ ಲೆಂಥ್, ಫುಲ್ಲರ್ ಲೆಂಥ್‌ನ ಸ್ವಿಂಗ್‌ಗಳು, ಲೋ ಫುಲ್ ಟಾಸ್‌ಗಳು ಎಲ್ಲವುಗಳಿಗೆ ಉತ್ತರ ಕಂಡುಕೊಂಡಿರುವ ಬ್ಯಾಟ್ಸ್‌ಮನ್‌ಗಳನ್ನು ಈಗ ಕೆಣಕುತ್ತಾ ಆಡಿಸುವುದು ಬಲು ಕಷ್ಟ. ಹಾಗಿದ್ದೂ ‘ಗುಜರಾತ್ ಟೈಟನ್ಸ್’ (ಜಿಟಿ) ತಂಡವು ಬೌಲಿಂಗ್ ಅಸ್ತ್ರದಿಂದಲೇ ಕೆಲವು ಪಂದ್ಯಗಳನ್ನು ಗೆದ್ದಿದೆ.

ಈ ಸಲದ ಐಪಿಎಲ್ ಋತು ಪ್ರಾರಂಭವಾಗುವ ಮೊದಲು ಮೊಹಮ್ಮದ್ ಸಿರಾಜ್ ತುಂಬಾ ಒಳ್ಳೆಯ ಫಾರ್ಮ್‌ನಲ್ಲಿ ಇರಲಿಲ್ಲ. ಮೊದಲಿನ ಮೊನಚನ್ನು ಅವರು ಕಳೆದುಕೊಂಡಿದ್ದರು. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅವರಿಗೆ ಕಹಿ ಅನುಭವಗಳೇ ಹೆಚ್ಚು ಉಳಿದಿದ್ದವು. ಅವೆಲ್ಲವೂ ಚುಟುಕು ಕ್ರಿಕೆಟ್‌ನಲ್ಲಿ ಮುಖ್ಯ ಆಗುವುದೇ ಇಲ್ಲ ಎನ್ನುವುದನ್ನು ಅವರು ಈ ಐಪಿಎಲ್‌ನಲ್ಲಿ ಸಾಬೀತುಪಡಿಸಿದರು.

ಅವರ ವಿಷಯ ಹಾಗಿರಲಿ. ಪ್ರಸಿದ್ಧ ಕೃಷ್ಣ ಕರ್ನಾಟಕದ ಹುಡುಗ. ಚೆಂಡಿನ ಗತಿಯನ್ನು ಬದಲಿಸುತ್ತಾ ಆಟ ಆಡಬಲ್ಲ ಅವರು, ಸ್ವಿಂಗ್ ಮೂಲಕವೂ ಬ್ಯಾಟ್ಸ್‌ಮನ್ ಅಂದಾಜು ತಪ್ಪುವಂತೆ ಮಾಡಬಲ್ಲರು. ಅವರು 2022ರಲ್ಲಿ ಐಪಿಎಲ್‌ನಲ್ಲಿ ಹೆಚ್ಚು ವಿಕೆಟ್ ಪಡೆದಿದ್ದರು. ಅದಾದ ಮೇಲೆ ಅವರಿಗೆ ಅಲ್ಪವಿರಾಮ. ಆಟದಿಂದ ಗಮನಸೆಳೆಯುವ ಅವಕಾಶ ಸಿಕ್ಕಿದ್ದೇ ಕಡಿಮೆ. ಅವರನ್ನು ಮೊನಚು ಅಸ್ತ್ರವಾಗಿ ಈ ಸಲ ಸಾಣೆ ಹಿಡಿದಿರುವುದು ಆಶಿಶ್ ನೆಹ್ರಾ.

‘ಗುಜರಾತ್ ಟೈಟನ್ಸ್’ ತಂಡದ ಮುಖ್ಯ ಕೋಚ್ ಆಶಿಶ್ ನೆಹ್ರಾ. ಅವರು ಕ್ರಿಕೆಟ್‌ನ ಸಾಂಪ್ರದಾಯಿಕ ಪಾಠಗಳನ್ನು ಕಲಿತು ಬಂದಿದ್ದವರು. ನೀಳ ಕಾಯದ ಅವರು ದಣಿದಂತೆ ಕಾಣುತ್ತಿದ್ದರೂ, ಚೆಂಡನ್ನು ಸ್ವಿಂಗ್ ಮಾಡುವಲ್ಲಿ ನಿಸ್ಸೀಮರಾಗಿದ್ದರು. ಚುಟುಕು ಕ್ರಿಕೆಟ್‌ನಲ್ಲಿ ಕೇವಲ ವೇಗವಾಗಿ ಎಸೆತಗಳನ್ನು ಹಾಕಿದರೆ ಫಲ ಸಿಗದು. ಅತಿ ವೇಗವೇ ಇಲ್ಲಿ ಮುಳುವೂ ಆಗಿರುವ ಉದಾಹರಣೆಗಳು ಇವೆ. ‘ರಾಜಸ್ಥಾನ್ ರಾಯಲ್ಸ್’ ತಂಡದ ಜೋಫ್ರಾ ಆರ್ಚರ್ ಅತಿ ದುಬಾರಿ ಆಗುತ್ತಿದ್ದಾರೆ. ಅದು ವೇಗದ ಕಾರಣಕ್ಕೇ ಹೌದು. ನೆಹ್ರಾ ಅದನ್ನು ನಿಯಂತ್ರಣದಲ್ಲಿ ಇರಿಸಿಕೊಂಡು ವಿಕೆಟ್ ಪಡೆಯುವ ದಾರಿಗಳನ್ನು ತಮ್ಮ ತಂಡದ ಬೌಲರ್‌ಗಳಿಗೆ ಹೇಳಿಕೊಟ್ಟಿದ್ದಾರೆ. ನಿಗೂಢ ಎನ್ನಿಸುವ ಲೈನ್‌ನಲ್ಲಿ ಪ್ರಸಿದ್ಧ ಕೃಷ್ಣ ಬೌಲಿಂಗ್ ಮಾಡುತ್ತಾರೆ. ಅದರಲ್ಲಿ ನೆಹ್ರಾ ಸಲಹೆಗಳು ಮಿಳಿತವಾಗಿವೆ.

ಈ ಸಲದ ಐಪಿಎಲ್‌ಗೆ ಮೊದಲು ಆಟಗಾರರ ಹರಾಜು ಪ್ರಕ್ರಿಯೆ ನಡೆದಾಗ ‘ಜಿಟಿ’ ತಂಡವು ಬೌಲಿಂಗ್ ಬಲ ಹೆಚ್ಚಿಸಿಕೊಳ್ಳಲು ತಕ್ಕ ಆಯ್ಕೆಗೆ ಮುಂದಾಗಿತ್ತು. ಸಿರಾಜ್, ಪ್ರಸಿದ್ಧ ಅಲ್ಲದೆ ಅನುಭವಿ ವೇಗದ ಬೌಲರ್ ಕಗಿಸೊ ರಬಾಡ ಆ ಪಡೆಯ ಭಾಗ ಆದರು. ಸ್ಪಿನ್ ವಿಭಾಗದಲ್ಲಿ ರಶೀದ್ ಖಾನ್ ಇದ್ದರು. ಅವರ ಜೊತೆಗೆ ಸಾಯಿ ಕಿಶೋರ್ ಅವರನ್ನು ಸೇರಿಸಿಕೊಂಡರು. ತಮಿಳುನಾಡಿನ ಈ ಪ್ರತಿಭಾವಂತ ‘ಚೆನ್ನೈ ಸೂಪರ್ ಕಿಂಗ್ಸ್’ ತಂಡದ ಪರವಾಗಿ ಎರಡು ಋತುಗಳಲ್ಲಿ ಬೆಂಚ್ ಕಾಯಿಸಿ ಬರಬೇಕಾಗಿತ್ತಷ್ಟೆ. ಅಲ್ಲಿ ರವೀಂದ್ರ ಜಡೇಜಾ ನೆರಳಿನ ಹಿಂದೆಯೇ ಉಳಿಯಬೇಕಾದ ಅನಿವಾರ್ಯ ಎದುರಾಗಿತ್ತು. ಅವರ ಎಡಗೈ ಸ್ಪಿನ್‌ನ ಸಾಂಪ್ರದಾಯಿಕ ಮೊನಚು ಅರಿತ ನೆಹ್ರಾ ಈ ಸಲ ಆರಿಸಿಕೊಂಡರು. ಅವರಿಂದ ನಾಲ್ಕು ಓವರ್ ಪೂರ್ಣ ಕೋಟಾ ಬೌಲ್ ಮಾಡಿಸಿದ್ದು ಅತಿ ವಿರಳ ಎನ್ನುವುದೇನೋ ನಿಜ. ಆದರೆ, ವಿಕೆಟ್ ಬೇಕಿದ್ದಾಗ ಅವರನ್ನು ನೆಚ್ಚಿಕೊಳ್ಳುವ ಸಾಧ್ಯತೆಗೆ ಎಡೆಗೊಟ್ಟಿದ್ದು ಗಮನಾರ್ಹ.

ಫಲ ಎದುರಲ್ಲೇ ಇದೆ. ಒಟ್ಟು 11 ಪಂದ್ಯಗಳಲ್ಲಿ ಪ್ರಸಿದ್ಧ 20 ವಿಕೆಟ್‌ಗಳನ್ನು ಕಿತ್ತು, ಆ ಘಟ್ಟದಲ್ಲಿ ನೇರಳೆ ಬಣ್ಣದ ಟೋಪಿ ಹಾಕಿಕೊಂಡಿದ್ದರು. ಪ್ರಸಿದ್ಧ ಬೌಲಿಂಗ್ ಎಕಾನಮಿ 7.65. ಚುಟುಕು ಕ್ರಿಕೆಟ್‌ನಲ್ಲಿ ಇದು ಗಮನಾರ್ಹ ಸಾಧನೆ. ಮೊಹಮ್ಮದ್ ಸಿರಾಜ್ 15 ವಿಕೆಟ್‌ಗಳನ್ನು ಅಷ್ಟೇ ಪಂದ್ಯಗಳಲ್ಲಿ ಕಿತ್ತಿದ್ದಾರೆ, ಸಾಯಿ ಕಿಶೋರ್ 14 ವಿಕೆಟ್‌ಗಳನ್ನು ಪಡೆದರು. ಅವರು 11 ಪಂದ್ಯಗಳಲ್ಲಿ ಕೇವಲ 177 ಎಸೆತಗಳನ್ನು ಬೌಲ್ ಮಾಡಿದ್ದರು. ಪ್ರಸಿದ್ಧ ಹಾಗೂ ಸಿರಾಜ್ ಇಬ್ಬರೂ ಅವರಿಗಿಂತ ಕನಿಷ್ಠ 60 ಎಸೆತಗಳಿಗೂ ಹೆಚ್ಚು ಬೌಲ್ ಮಾಡಿದ್ದಾರೆ. ಆ ಅಂಕಿಅಂಶ ಗಮನಿಸಿದರೆ, ಈ ಎಡಗೈ ಸ್ಪಿನ್ನರ್ ಯಾಕೆ ವಿಕೆಟ್ ಟೇಕಿಂಗ್ ಬೌಲರ್ ಎನ್ನುವುದು ಅರಿವಾಗುತ್ತದೆ.

ಬ್ಯಾಟ್ಸ್‌ಮನ್‌ಗಳ ಹೊಡಿ–ಬಡಿ ಆಟದ ಮಧ್ಯೆ ಹೀಗೆ ಬೌಲರ್‌ಗಳ ತಂಗಾಳಿಯಂತಹ ಸುದ್ದಿ ಹಿತಾನುಭವ ನೀಡುತ್ತದೆ. ಅದಕ್ಕೆ ನೆಹ್ರಾ ಅವರಿಗೆ ಧನ್ಯವಾದ ಹೇಳಬೇಕು.

ಪ್ರತಿಕ್ರಿಯಿಸಿ: feedback@sudha.co.in